260

1239

ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಪ್ರಾಯುಷ್ ಆದ್ದು. [ನಂ. 31.

ಬೆಂಗಳೂರು, ಗುರುವಾರ, ಆಗೆಸ್ಟು ತಾ|| 4, ಸ್ ೧೯೦೪.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ಕಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆಯೋರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ನಾಮೆ.

ನಂ. I. ತಾರೀಖು 29ನೆ ಜುಲೈ 1904.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ನಂಜನಗೂಡು ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು 156 ಫೈನಲ್ ಟೈಟಲ್ ಡೀಡಯಾನೆ ಖಾಯಂ ಪಟ್ಟಿಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವೆ.

2. ಸದರಿ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರರು ಐರ್ಜ್ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸುಗಳನ್ನು ಬೇರೆ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲಿ ಕೊಡಲ್ಪಟ್ಟ ಹಂಗಾಮಿ ಪಟ್ಟಿಗಳು ರದ್ದು ಮಾಡಲ್ಪಟ್ಟವು ತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತ.

ಜೆ. ಪಿ. ಗ್ಯಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟಲಮೆಂಟ್ಸ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 20ನೆ ಜುಲೈ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ಫಾರೆಸ್ಟ್ ರೇಂಜಿಗೆ ಕೇರಿದ ಬಿಳಿಕಲ್ ಮತ್ತು ಚಿಲಂದಾಡಿ ಸ್ಪೆಷಲ್ ಫಾರೆಸ್ಟ್‌ಗಳಲ್ಲಿ ಇರುವ ಪಪ್ಪಳೀ ಚಕ್ಕೆ 1904–1905ನೆ ಸಾಲು ಬಾಬತು 1905ನೆ ಜೂನ್ ಆಖೈರ್‌ವರಿವಿಗೆ ರೂಢಿಸಿಕೊಳ್ಳುವ ಹಕ್ಕನ್ನು 20—8—1904ನೆ ಮಂಗಳವಾರದಲ್ಲಿ ಕಾನಕಾನಹಳ್ಳಿ ಮೊಕ್ಕಾಂನಲ್ಲಿ ರೇಂಜ್ ಫಾರೆಸ್ಟ್ ಆಫಿಸರವರು ಬಹಿರಂಗವಾಗಿ ಹರಾಜು ಹಾಕುವರು. ಈ ಹರಾಜು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಮಂಜೂರಾತಿಗೆ ಬಳಪಟ್ಟಿರುತ್ತ.

1. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಒಟ್ಟು ಮೊಬಲಗಿನ ಪೈಕಿ ಕಾಲುಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಈರೀತಿ ಮಾಡದೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರ್ಕಾರಕ್ಕೆ ಉಂಟಾಗುವ ನಷ್ಟಕ್ಕೆ ಪೂರು ದರಖಾಸ್ತುದಾರನನ್ನು ಗುರಿಮಾಡಲ್ಪಡುತ್ತೆ. ಆದರೆ ಫಾಯಿದೆ ವುಂಟಾದಲ್ಲಿ ಈತನು ಭಾಗಿಯಾಗುವದಿಲ್ಲ.

2. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನೂ ಪಾವತಿ ಮಾಡಬೇಕು. ಹಾಗೆ ಸದರೀ ಹಣವನ್ನು ಪಾವತಿ ಮಾಡದೇ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಇನ್ನು ಬಾಕಿ ವುಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ ಮಾಡಲಾಗುತ್ತೆ. ಪೂರಾ ಮೊಬಲಗು ಪಾವತಿ ಆದ ಕೂಡ್ಲೆ ಮಾಲು ರಪ್ತ ಮಾಡಿಕೊಳ್ಳಲು ಲೈಸೆನ್ಸು ಕೊಡುತ್ತೆ.

3. ಕಂಟ್ರಾಕ್ಟುದಾರನಿಗೆ ಕೊಡೋಣಾಗುವ ಲೈಸೆನ್ಸಿನಲ್ಲಿ ನಮೂದಾಗುವ ವಾಯಿದೆ ಅಂದರ್‌ವಾರ್ ಸದರೀ ಚಕ್ಕೆಯನ್ನು ಸಾಗಿಸಿಕೊಂಡು ವಾಯಿದೆ ಅಂದರ್‌ವಾರ್ ಲೈಸೆನ್ಸು ವಾಪಸು ಮಾಡಬೇಕು.

4. ರೇಂಜ್ ಫಾರೆಸ್ಟ್ ಆಫಿಸರು ಯಾವದೊಂದು ಕಾರಣವನ್ನೂ ತಿಳಿಸದೇ ದರಖಾಸ್ತು ಮಂಜೂರ್ ಮಾಡುವದಕ್ಕೂ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿ ಇರುತ್ತಾರೆ.

5. ದರಖಾಸ್ತುದಾರನಾಗಲೀ ಅಥವಾ ಆತನಕಡೆ ಆಳುಗಳಾಗಲೀ ಜಿನಸಿ ಜವಾಬಣೀ ನೆದದಮೇಲೆ ಯಾವ ಗಿಡವನ್ನೂ ನಾಶ ಮಾಡಕೂಡದು. ಮತ್ತು ಚಕ್ಕೆ ರೂಢಿಸುವದರಲ್ಲಿ ಬಳ್ಳಿಯು ತಾಯಿಬೇರುಗಳಿಗೆ ಜಾಯ ಆಗದಂತೆ ಪಕ್ಕದ ಬೇರುಗಳಿಂದ ಮಾತ್ರ ಚಕ್ಕೆ ಜಮಾಯಿಸಿಕೊಳ್ಳಬೇಕು.

6. ಸ್ಟೇಟ್ ಫಾರೆಸ್ಟಿಗೆ ದರಖಾಸ್ತುದಾರನ ಅಶ್ರದ್ಧೆಯಿಂದಲಾಗಲೀ ಅಥವಾ ಆತನ ಆಳುಗಳಿಂದಲಾಗಲೀ ಫಾರೆಸ್ಟಿಗೆ ಬೆಂಕಿ ಬಿತ್ತೆಂದು ಫಾರೆಸ್ಟು ಇಲಾಖೆಯವರಿಗೆ ತಿಳಿಯಬಂದಲ್ಲಿ ಆ ಕೃತ್ಯಕ್ಕೆ ದರಖಾಸ್ತುದಾರನನ್ನು ಗುರಿಪಡಿಸಲಾಗುತ್ತೆ. ಮತ್ತು ಕಂಟ್ರಾಕ್ಟುದಾರ ಅಥವಾ ಅವರ ಆಳುಗಳು ಅನಂಗೆ ಕ್ಲುಪ್ತವಾಗಿ ಕೊಟ್ಟು ಇರುವ ಜಾಗಾದಲ್ಲಿ ಯಾವದಾದರೂ ಫಾರೆಸ್ಟು ತಕಸೀರ್ ನಡಸಿದಲ್ಲಿ ಅಂಥಾವುಗಳನ್ನು ಫಾರೆಸ್ಟು ರೂಲ್ಸು ಪ್ರಕಾರ ಶಿಕ್ಷೆ ಜರಗಿಸಲಾಗುತ್ತೆ.

7. ದರಖಾಸ್ತುದಾರನೇ ಆಗಲೀ ಅಥವಾ ಆತನ ಕಡೆ ನೌಕರರೇ ಆಗಲೀ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತಮಯಾ ನಂತರ ಸ್ಟೇಟ್ ಫಾರೆಸ್ಟಿನಲ್ಲಿ ಪ್ರವೇಶಿಸಕೂಡದು.

8. ಮೇಲ್ಕಂಡ ಷರತ್ತುಗಳ ಪೈಕಿ ಯಾವ ಭಾಗದಲ್ಲಿಯಾದರೂ ಹರಾಜುದಾರನು ವಿರೋಧವಾಗಿ ನಡದದ್ದೇ ಅದರೆ ಖಾತರೀ ಬಗ್ಗೆ ಶೇವಣಿ ಇಟ್ಟ ಸೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ರೂಢಿಸಿಕೊಳ್ಳುವ ಹಕ್ಕು ಸಹಾ ರದ್ದು ಪಡಿಸಲಾಗುತ್ತೆ.

9. ಹರಾಜು ದರಖಾಸ್ತುದಾರನು ತನ್ನ ಕಂಟ್ರಾಕ್ಟು ಷರತ್ತುಗಳಿಗೆ ಬದ್ಧನಾಗಲು ಖಾತರೀ ಬಗ್ಗೆ ಶೇಕಡ 25 ರೂಪಾಯಿಗಳು ನಗದಾಗಿ ಶೇವಣಿ ಇಡಬೇಕು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಕೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ ನಂಬರ್ 55.

ತಾರೀಖು 25ನೆ ಜುಲೈ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸರ್ಕಾರದ ಆಡಳಿತದಲ್ಲಿರುವ ಸ್ಟೇಟ್ ಫಾರೆಸ್ಟ್ ರಿಜರ್ವ್ಡ್ ಜಮೀನು ಮತ್ತು ಪ್ಲಾಂಟೇಷನ್‌ಗಳ ದೇಖರೇಖಿ ಎಲ್ಲಾ ಜಮೀನುಗಳಲ್ಲಿಯೂ 1904—1905ನೆ ಸಾಲಿನಲ್ಲಿ ದೊರಿಯುವ ಈ ಕೆಳಗೆ ಕಂಡ ಪಸಾರೆ ಜಿನಸುಗಳನ್ನು ತಾಲ್ಲೂಕ್‌ವಾರ್, ಹೋಬಳಿವಾರ್, ಜಂಗಲ್‌ವಾರ್, ಅಥವಾ ಮತ್ತ್ಯಾವರೀತಿಯಲ್ಲಾದರೂ ಡಿಸ್ಟ್ರಿಕ್ಟು ಫಾರೆಸ್ಟ್ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಆಫಿಸರು ಈ ಕೆಳಗೆ ಪಟ್ಟಿಯಲ್ಲಿ ನಮೂದಿರುವ ಸ್ಥಳಗಳಲ್ಲಿ ಆಯಾಯ ತಾರೀಖಿನಲ್ಲಿ ತಾಲ್ಲೂಕು ಅಮಲ್‌ದಾರ್‌ರವರು ಜೊತೆಯಲ್ಲಿ ಹರಾಜು ಮಾಡಿಸುತ್ತಾರೆ. ನಿಯಾಮಕವಾದ ದಿನವು ಹರಾಜು ಮಧ್ಯಾಹ್ನ 12 ಘಂಟೆಗೆ ಸುರು ಮಾಡಲ್ಪಡುವುದು:—

ನಂಬರು.	ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಮಾಡುವ ಸ್ಥಳ.
1	ಮಾಲೂರ	24ನೆ ಸೆಪ್ಟಂಬರ್ 1904.	ಕೋಲಾರ.
2	ಕೋಲಾರ	26 ಡಿಟೋ	
3	ಮುಳಬಾಗಲು	28 ಡಿಟೋ	
4	ಬಂಗಾರಪೇಟೆ	30 ಡಿಟೋ	
5	ಶ್ರೀನಿವಾಸಪುರ	3ನೆ ಅಕ್ಟೋಬರ್ 1904.	
6	ಚಿಂತಾಮಣಿ	5 ಡಿಟೋ	
7	ಶಿಡ್ಲಘಟ್ಟ	7 ಡಿಟೋ	
8	ಚಿಕ್ಕಬಳ್ಳಾಪುರ	12 ಡಿಟೋ	
9	ಗೌರೀಬಿದನೂರು	14 ಡಿಟೋ	
10	ಗುಡಿಬಂಡೆ ಸಬ್ ತಾಲ್ಲೂಕು	28 ಡಿಟೋ	
11	ಬಾಗೇಪಲ್ಲಿ	31 ಡಿಟೋ	

ಪಸಾರೆ ದಿನಸುಗಳ ತಪಸೀಲು.

1. ಹುಣಸೇಹಣ್ಣು
2. ಹೊಂಗೇಕಾಯಿ
3. ಶಿಗೇಕಾಯಿ
4. ಗೋಂದು
5. ಜೇನುತುಪ್ಪ
6. ಜೇನುಮೇಣ
7. ಕಪಿಲಾರಂಗು
8. ಗೇರುಪಪ್ಪು
9. ಬ್ಯಾಲದಹಣ್ಣು
10. ಕಲ್ಲುಹುವ್ವು
11. ಮರಡೀ ಬೀಜ ಅಥವಾ ಚಾರುಪಪ್ಪು
12. ತಾರೇಕಾಯಿ
13. ಹೊಪ್ಲೀಚಕ್ಕೆ
14. ಅಳಲೇಕಾಯಿ

ಷರಾವನ್ನಿಲ್ಲದ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ದೊರಿಯಬಹುದಾದ 1—2—3ನೆ ನಂಬರು ದಿನಸುಗಳು ಅವಶ್ಯಕವಿದ್ದಲ್ಲಿ ಅಲಾಹಿದಾ ಟೆಂಡರು ಮಾಡಿಸಲ್ಪಡುವವು.

262

2. ಛಡ ಸವಾಲ್‌ದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಪಾವತೀ ಮಾಡಬೇಕು. ಹಪ್ಪಿದರೆ ಛಡ ಸವಾಲ್ದಾರನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜು ಮಾಡಿಸಲ್ಪಡುವದು. ದುಸರಾ ಹರಾಜಿನಲ್ಲಿ ಛಡೆ ಸವಾಲ್ ಮೊಬಲಗು ಕಮ್ಮಿಯಾಗಿದ್ದಲ್ಲಿ ಕಮ್ಮಿಯಾಗುವ ಮೊಬಲಗನ್ನು ಅವನಿಂದ ರೆವಿನ್ಯೂ ಬಾಕಿಯಂತೆ ಭೂವಿಸಿ ವಸೂಲ್ಮಾಡಲ್ಪಡುವದು. ಆದರೆ ದುಸರಾ ಹರಾಜಿನಲ್ಲಿ ಫಾಯಿದೆ ಉಂಟಾದ್ದಲ್ಲಿ ಅಷಕ್ಕೆ ಅವನಿಗೆ ಯಾವ ಹಕ್ಕೂ ಇರುವದಿಲ್ಲ. ಹರಾಜು ಮುಂಜಾರಾದ ಸಂಗತಿಯನ್ನು ಛಡ ಸವಾಲ್ದಾರನಿಗೆ ತಿಳಿಯಪಡಿಸಿದ ಬಂದು ವಾರದೊಳಗಾಗಿ ಬಾಕಿ ಮುಕ್ತಾಲು ಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ಮೊದಲು ತೀರಣಿ ಕಟ್ಟಿದ ಕಾಲು ಹಿಸ್ಸೆಯನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಬಾಬು ದುಸರಾ ಹರಾಜು ಮಾಡಲ್ಪಡುವದಲ್ಲದೆ ಛಡ ಸವಾಲ್ದಾರನಿಗೆ ಬಾಬಿನಲ್ಲಿ ಯಾವ ಹಕ್ಕೂ ಇರುವದಿಲ್ಲ. ಪೂರಾ ಹಣ ಪಾವತಿ ಮಾಡಿದ ನಂತರ ಹರಾಜು ವೇಳೆಯಲ್ಲಿ ತಿಳಿಸಲ್ಪಡುವ ಕೆಲವು ಷರತ್ತುಗಳನ್ನು ನಮೂದಿಸಿ ಛಡ ಸವಾಲ್ದಾರನು ಮುಚ್ಚಳಿಕೆ ಬರೆದು ಕೊಟ್ಟ ಹೊರ್ತು ಬಾಬನ್ನು ರೂಢಿಸಲು ಅವನಿಗೆ ಅಪ್ಪಣೆ ದೊರಿಯಲಾರದು. ಹರಾಜು ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಲೋಕಲ್ ಸೆಸ್ ಪಾವತಿ ಮಾಡಬೇಕು.

3. ಈ ಹರಾಜು ಫಾರೆಸ್ಟು ಇಲಾಖೆಯಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮುಂಜಾರಾತಿಗೆ ಬಳಪಟ್ಟು ಇರುತ್ತೆ.

4. ಹಿಡುವಳಿ ಜಮೀನ್ನಲ್ಲಿ ಸ್ವಂತ ತೋಪುಗಳಲ್ಲಿಯೂ ಇರುವ ಫಸಲ್ ಕಂಟ್ರಾಕ್ಟ್‌ಗೆ ಸೇರಿದ್ದಲ್ಲ.

5. ಇನಾಂದಾರ್ರ ಹಕ್ಕಿನಲ್ಲಿ ಕಂಟ್ರಾಕ್ಟರು ಪ್ರವೇಶ ಮಾಡಕೂಡದು.

6. ಗ್ರಾಮ ಠಾಣಾಗಳಲ್ಲೂ, ಗ್ರಾಮ ತೋಪ್ರಗಳಲ್ಲೂ, ಸ್ಮಶಾನ ಜಾಗಾಗಳಲ್ಲಿಯೂ ಮತ್ತು ರಸ್ತೆ ಸಾಲು ಮರಗಳಲ್ಲಿಯೂ ಇರುವ ಫಸಲು ಈ ಹರಾಜಿಗೆ ಸೇರಿದ್ದಲ್ಲ ಅವು ಅಮಲ್ದಾರ್ರುಗಳಿಂದ ರೆವಿನ್ಯೂ ಇಲಾಖೆ ಬಗ್ಯಾಗಿ ಅಲಾಹಿದಾ ಹರಾಜು ಮಾಡಲ್ಪಡುವವೆ.

7. ಫಸಲನ್ನು ರೂಢಿಸುವ ನೆಪದಮೇಲೆ ಇಜಾರೆದಾರನು ಮರಗಳನ್ನು ನಾಶಪಡಿಸಕೂಡದು.

8. ಹರಾಜು ಮಾಡಲ್ಪಟ್ಟ ದಿನಸುಗಳ ವಿನಹಾ ಮತ್ಯಾವ ದಿನಸುಗಳಿನ್ನೂ ಇಜಾರೆದಾರನು ರೂಢಿಸಕೂಡದು.

9. 1905ನೆ ಜನವರಿ ಆಖೈರೊಳಗಾಗಿ ಹದ್ದುಬಸ್ತು ಗೊತ್ತಾಗಿರುವ ಫಾರೆಸ್ಟುಗಳಲ್ಲಿನ ಮತ್ತು ಪ್ಲಾಂಟೇರ್ಷನ್‌ಗಳಲ್ಲಿನ ಫಸಲನ್ನು ಸಾಗಿಸಿಕೊಂಡು ಹೋಗಬೇಕು. ಅವುಗಳು ಬಿಂಕಿ ತಡೆ ಬಗ್ಯಾಗಿ ಆ ತಾರೀಖು ಲಾಗಾಯಿತು ಬಿಂದ್ ಮಾಡಲ್ಪಡುವವು. ಇತರ ಕಡೆಯಲ್ಲಿನ ಫಸಲುಗಳನ್ನು 1905ನೆ ಜೂ ಆಖೈರ್ ವರಿವಿಗೂ ಕಂಟ್ರಾಕ್ಟರು ರೂಢಿಸಿಕೊಳ್ಳಬಹುದು.

10. ಜೆನಸಿಗಳನ್ನು ರೂಢಿಸುವದಕ್ಕೆ ಆಗಲೀ ಅಥವಾ ಮತ್ಯಾವ ಸಬಬಿನಿಂದಲೇ ಆಗಲೀ ಫಾರೆಸ್ಟು ಮತ್ತು ಪ್ಲಾಂಟೇರ್ಷಗಳಿಗೆ ಬೆಂಕಿ ಇಡಕೂಡದು.

11. ಹರಾಜಿನಲ್ಲಿ ಸರಿಯಾದ ಸವಾಲ್ ಬಾರದಿದ್ದರೆ ಹರಾಜು ಮಾಡುವ ಆಫಿಸರು ಹರ್ರಾಜನ್ನು ಖೈದು ಮಾಡುವದಕ್ಕಾಗಲಿ ವ ಮುಂದೆ ಹರಾಜು ಮಾಡುವದಕ್ಕಾಗಲೀ ಸ್ವತಂತ್ರರಾಗಿರುತ್ತಾರೆ.

ಎಚ್. ಶ್ರೀನಿವಾಸರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ನೋಟಿಫಿಕೇರ್ಷ, ತಾರೀಖು 22ನೆ ಜುಲೈ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶಿವಮೊಗ್ಗ ಡಿಸ್ಟ್ರಿಕ್ಟಿನ ಹೊನ್ನಾಳಿ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇರ್ಷ ವಿನಹ ಶಿವಮೊಗ್ಗ ಡಿಸ್ಟ್ರಿಕ್ಟಿನ ಸರಕಾರೀ ಜಮೀನುಗಳಲ್ಲಿ ದೊರೆಯುವ ತಂಗಡಿ ಮತ್ತು ಕಕ್ಕೆ ಜಕ್ಕೆಗಳನ್ನು 1904ನೆ ಸೆಪ್ಟಂಬರ ಗುರ್ರೆ ಲಾಗಾಯಿತು 1905ನೆ ಜೂ ಆಖೈರ್ ವರಿಗೆ ಜವಾಯಿಸಿ ತೆಗದುಕೊಂಡು ಹೋಗತಕ್ಕ ಒಟ್ಟು ಸ್ವಾತಂತ್ರದ ಹಕ್ಕು ಬಹಿರಂಗವಾಗಿ ತಾಲ್ಲೂಕುವಾರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಅಥವಾ ಡೆಪ್ಯುಟಿ ಕಮ್ಮಿಷರಿಂದ ನೇಮಿಸಲ್ಪಟ್ಟು ಇತರ ಆಫಿಸರಿಂದ 1904ನೆ ಇಸವಿ ಆಗಸ್ಟು ತಾರೀಖು 26ರಲ್ಲು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತದೆ.

ಹರಾಜು ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜು ಸುರು ಮಾಡಲ್ಪಡುವದು. ಅವಶ್ಯವಿದ್ದಲ್ಲಿ ಮಾರನೇ ದಿವಸ ಅದೇ ಹೊತ್ತಿಗೆ ಹರಾಜು ಕ್ರಮ ಜರಿಗಿಸಲ್ಪಟ್ಟೀತು.

ಯಾವ ಕಾರಣವನ್ನು ನಮೂದಿಸದೆ ಈ ಹರಾಜನ್ನು ಅಂಗೀಕರಿಸಲಿಕ್ಕೂ ತಿರಸ್ಕರಿಸಲಿಕ್ಕೂ ಡೆಪ್ಯುಟಿ ಕಮ್ಮಿಷರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ.

ಹರಾಜು ಮಾಡತಕ್ಕವರು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಮೊಖ್ತ್ಯಾರಿ ಹೊಂದಿದ ಏಜಂಟರ ಮೂಲಕವಾಗಲಿ ಹಾಜರಾಗಿ ದರಖಾಸ್ತು ಮಾಡಬೇಕು. ಬಂದುನೂರು ರೂಪಾಯಿ ತೀರಣಿ ಇಟ್ಟು ಹೊರ್ತಾಗಿ ತನಗೋಸ್ಕರವೇಯಾಗಲಿ ಅಥವಾ ಎರಡನೆಯವರಿಗೋಸ್ಕರವಾಗಿಯೇ ಆಗಲಿ ದರಖಾಸ್ತು ಮಾಡಲು ಯಾವನೊಬ್ಬ ಮನುಷ್ಯನಿಗೆ ಅಪ್ಪಣೆ ಕೊಡಲು ಆಗಲಾರದು. ಹರಾಜು ಆದ ಕೂಡ್ಲೇನೆ ಮುಂಜಾರಾಗದೆ ಇರುವವರ ದರಖಾಸ್ತು ದಾರರ ಡಿಪಾಜಿಟ್ ಮೊಬಲಗು ಅವರಿಗೆ ವಾಪಸ್ ಮಾಡಲಾಹೀತು. ಹರಾಜು ಮುಂಜಾರಾದ ಸಂಗತಿ ದರಖಾಸ್ತುದಾರನಿಗೆ ಆಗಲಿ ಯಾ ಅವರ ಏಜಂಟರಿಗೆಯಾಗಲಿ ತಿಳಿಸಿದ ತಾರೀಖು ಲಾಗಾಯಿತು ಮೂರು ದಿವಸಗಳೊಳಗಾಗಿ ಡಿಪಾಜಿಟ್ ಹಣ ತೀರಿಸಿಕೊಂಡು ಒಟ್ಟು ಗೊತ್ತಾದ ಮೊಬಲಗು ಪೈಕಿ ಎಂಟರಲ್ಲಿ ಬಂದು ಹಿಸ್ಸೆ ಮೊಬಲಗನ್ನು

263

ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ ಜಮಾ ಮಾಡಿಸಬೇಕು. ಆದರಂತೆ ಮಾಡಲು ತಪ್ಪಿದಲ್ಲಿ ಸದರಿ 100 ರೂಪಾಯಿ ಡಿಪಾಜಿಟ್ಟು ಮೊಬಲಗನ್ನು ಸರಕಾರಕ್ಕೆ ಸೇರಿಸಿಕೊಂಡು ಮೇಲ್ಕಂಡ ಹಕ್ಕನ್ನು ಹರಾಜು ಮಾಡಿಸುವ ಆಫಿಸರಿಂದ ತಪ್ಪಿಹೋದ ದರಖಾಸ್ತುದಾರನ್ನ ನಷ್ಟಕ್ಕೆ ಗುರಿಪಡಿಸಿ ಹರಾಜು ಮಾಡಲಾಗುತ್ತದೆ. ಈ ಹಕ್ಕಿನಲ್ಲಿ ಏನಾದರೂ ಫಾಯಿದೆ ಬಂದರೆ ತಪ್ಪಿಹೋದ ದರಖಾಸ್ತುದಾರನಿಗೆ ಏನೂ ಹಕ್ಕು ಇರಲಾರದು.

ಈ ಕೆಳಗೆ ನಮೂದಿಸಿರುವ ಷರತ್ತುಗಳನುಸರಿಸಿ ನಡಿಯಲು ಬದ್ಧನಾಗಿರತಕ್ಕ ಬಗ್ಗೆ ಇಜಾರೆದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಹೆಸರಿನಲ್ಲಿ 200 ರೂಪಾಯಿ ಕಿಕ್ಯೂಟಿ ಇಡಬೇಕಲ್ಲದೆ ಛಾಪಾಕಾಗದ್ದಲ್ಲಿ ಮುಚ್ಚಳಿಕೆಯನ್ನು ಬರೆದುಕೊಡಬೇಕು. ಹರಾಜು ಮಂಜೂರಾದ್ದು ದರಖಾಸ್ತುದಾರನಿಗೆ ಅಥವಾ ಏಜಂಟದಾರನಿಗೆ ತೀರಿದ ತಾರೀಖು ಲಾಗಾಯಿತು 5 ದಿವಸಗಳೊಳಗಾಗಿ ಸದರಿ ಪೂರ್ತಿ ಪಾವತಿ ಮಾಡಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದರೆ ಮೊದಲು ಇಟ್ಟ ಠೇವಣಿ 100 ರೂಪಾಯಿಯನ್ನು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರೀ ಹಕ್ಕು ದಾರಿ ಪುನಹ ಹರಾಜು ಮಾಡಲ್ಪಡುವದು.

ಬಾಕಿಯಾಗುವ ಇಜಾರೆ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಬಂದಕ್ಕೆ ಬಂದು ಆಣೆ ಮೇರಿಗೆ ಆಗುವ ಲೋಕಲ್ ಸೆಸ್ 1903ನೆ ಅಕ್ಟೋಬರು ಗುರ್ಜಿ ಲಾಗಾಯಿತು ಈ ಕೆಳಗೆ ಕಾಣಿಸಲ್ಪಟ್ಟಿರುವ ಮೂರು ಕ್ವಾರಟರಲಿ ಖಿಸ್ತಿನಲ್ಲಿ ಕ್ರಮವಾಗಿ ಕೊಡಲ್ಪಡತಕ್ಕದ್ದು.

1904ನೆ ಅಕ್ಟೋಬರ್ ಗುರ್ಜಿಯಲ್ಲಿ.
1905ನೆ ಜನವರಿ ಡಿಟೋ
1905ನೆ ಏಪ್ರಿಲ್ ಡಿಟೋ

ಯಾರಾದರೂ ಬಂದು ಖಿಸ್ತಿನ ಮೊಬಲಗು ಮೇಲೆ ಕಂಡ ವಾಯಿದೆ ಕೆಳಗೆ ಪಾವತಿ ಮಾಡದೆ ಇದ್ದಲ್ಲಿ ಇಜಾರೆಯನ್ನು ರದ್ದು ಮಾಡಿ ರಫ್ತಾಗದೆ ಚಾಕಿ ಇರತಕ್ಕ ಚಕ್ಕೆಯು ಜಪ್ತಿಮಾಡಲ್ಪಟ್ಟು ಚಕ್ಕೆಯ ಜಮಾವಣೆ ಮತ್ತು ರಫ್ತು ಸಹಾ ನಿಲ್ಲಿಸಲ್ಪಟ್ಟು ಇಜಾರೆ ಮೊಬಲಗು ಸಂಪೂರ್ಣವಾಗಿ ರೆವಿನ್ಯೂ ಡಿಮ್ಯಾಂಡ್ ತರೀಕಾಗಿ ವಸೂಲ್ಮಾಡಲ್ಪಡುವದು.

ಷರತ್ತುಗಳು.

1. ಬಂದು ವರುಷಕ್ಕೆ ಕಮ್ಮಿ ಇರುವ ಎಳೇ ಬುಡಗಳಲ್ಲಿ ಚಕ್ಕೆ ತೆಗೆಯದಂತೆಯು ಕಡಿಯದಂತೆಯು ನೋಡಿಕೊಳ್ಳತಕ್ಕದ್ದು. ಚಕ್ಕೆ ತೆಗೆಯಲ್ಪಟ್ಟ ಗಿಡಗಳು ಹರಾಜುದಾರನದೆಯಾಗಿರುತ್ತೆ.

2. ಬೇರೆ ಬೇರೆ ಸ್ಥಳಗಳಲ್ಲಿ ಚಕ್ಕೆಗಳನ್ನು ಜಮಾಯಿಸಲು ನೇಮಿಸಲ್ಪಡುವ ಮೇಸ್ತ್ರಿ ಮತ್ತು ಷಿಕ್ಕಿ ಕಂಟ್ರಾಕ್ಟುದಾರುಗಳ ಹೆಸರುಗಳು ನಮೂದಿನಿಂದ ಬಂದು ಪಟ್ಟಿಯನ್ನು ಕೊಡಬೇಕು.

3. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಕೊಡುವ ನಮೂನೆಯಂತೆ ಸಾಗಿಸಿದ ಚಕ್ಕೆಯ ಪೊತ್ತವನ್ನು ತೋರಿಸುವ ಲೆಕ್ಕವನ್ನು ಇಡತಕ್ಕದ್ದು. ಫಾರೆಸ್ಟು ರೇಂಜರ್ ಮತ್ತು ಅಮಲ್ದಾರ್ರು ಯಾ ಪೊಲೀಸು ಇನ್ಸ್ಪೆಕ್ಟರು ಯಾ ಇವರ ದರ್ಜೆಗೆ ಮೇಲು ಪಟ್ಟ ಇತರ ಆಫೀಸರ ಅಜಮಾಯಿಷಿಗೆ ಸದರೀ ಲೆಕ್ಕಗಳು ಒಳಪಟ್ಟದ್ದಾಗಿರುತ್ತವೆ.

4. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಏರ್ಪಡಿಸುವ ಮೇರಿಗೆ ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಚಕ್ಕೆಗೆ ಪ್ಯಾಸು ಪಡಿಯತಕ್ಕದ್ದು.

5. ವಾಯಿದೆಯು ಪೂರೈಸಿದನಂತರ ಜಮಾಯಿಸಿಕೊಂಡು ಶಿವಮೊಗ್ಗ ಡಿಸ್ಟ್ರಿಕ್ಟಿನ ಗಡಿ ವಳಗಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರತಕ್ಕ ರೈಲ್ವೆ ಸ್ಟೇಷನ್ಗಳೊಳಗಾಗಲಿ ಬಾಕಿ ಇರತಕ್ಕ ಎಲ್ಲಾ ಚಕ್ಕೆ ಮೇಲಿನ ಹಕ್ಕನ್ನು ರದ್ದುಪಡಿಸತಕ್ಕದ್ದು.

6. ಮೇಲ್ಕಂಡ ಷರತ್ತಿನ ಮೇರಿಗೆ ನಡಿಯಲು ತಪ್ಪಿಹೋದಲ್ಲಿ ಇಜಾರೆ ರದ್ದು ಮಾಡುವದಲ್ಲದೆ ಅವರಿಗೂ ಜಮಾಯಿಸಿ ಹಾಜರು ಇಟ್ಟುಕೊಂಡಿರತಕ್ಕ ಪೈಕಿವ್ವ ಚಕ್ಕೆಯನ್ನು ಸರಕಾರಕ್ಕೆ ಸೇರಿಸಲ್ಪಡುತ್ತೆ. ಡೆಪ್ಯೂಟಿ ಕಮಿಷರ್ ಸಾಹೇಬರವರು ನಿಷ್ಕರ್ಷಿಸುವ ಮೇರೆ ಇಜಾರೆದಾರನಿಂದ ವಸೂಲಾದ ಪೂರಾ ಮೊಬಲಗಾಗಲಿ ಅಥವಾ ಆ ಪೈಕಿ ಕೆಲವು ಮೊಬಲಗಾಗಲಿ ಸೇರಿಸಲ್ಪಡಲಾರದು. ಅಂಥಾ ತಪ್ಪಿದ ಕಾಲದಲ್ಲಿ ಇಜಾರೆದಾರನಿಂದ ಬಾಕಿ ಇರತಕ್ಕ ಮೊಬಲಗು ರೆವಿನ್ಯೂ ಕಂಡಾಯದ ರೀತಿ ವಸೂಲ್ಮಾಡತಕ್ಕದ್ದು.

ಜೆ. ಮ್ಯಾಟ್ಬೈರೋ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ಚಿಕ್ಕಮಗಳೂರು, ತಾರೀಖು 19ನೆ ಜುಲೈ 1904.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ಕಂಡ ತಾಲ್ಲೂಕ್ಗಳಲ್ಲಿ ಇರುವ (ಸ್ಪೇಟ್ ಫಾರೆಸ್ಟ್ ಮತ್ತು ಪ್ರೊಟೆಕ್ಟೆಡ್ ಫಾರೆಸ್ಟ್ಗಳು ವಿನಃ) ಹಿಡುವಳಿಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕ್ಕೆ ಚಕ್ಕೆಯನ್ನು 1904ನೆ ಇಸವಿ ಜುಲೈ ಗುರ್ಜಿ ಲಾಗಾಯಿತು 1905ನೆ ಇಸವಿ ಜೂನ್ 30ನೆ ತಾರೀಖು ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ವಿವರಿಸಿ ಇರುವ ತಾರೀಖುಗಳಲ್ಲಿ ಆಯಾಯ ತಾಲ್ಲೂಕ್ ಅಮಲ್ದಾರ್ರಿಂದ ರೇಂಜಾಫಿಸರಗಳೊಡನೆ ಹರಾಜು ಮಾಡಿಸಲ್ಪಡುತ್ತೆ :—

	ತಾಲ್ಲೂಕ್ ಹೆಸರು.	ಹರಾಜು ತಾರೀಖು.	ಹರಾಜುಗತಕ್ಕ ಸ್ಥಳ.
1.	ಚಿಕ್ಕಮಗಳೂರು	8—8—04	ತಾಲ್ಲೂಕ್ ಕಛೇರಿಲಿ.
2.	ಕಡೂರು	10—8—04	ಡಿಟೋ
3.	ತರೀಕೆರೆ	12—8—04	ಡಿಟೋ

ಪರಾ—ಹರಾಜು ನಿಬಂಧನೆ ಮುಂತಾದ ತಪಸೀಲ್ಗಳನ್ನ ಈ ಬಗ್ಗೆ ಫಾಯಿಷ್ಮಾಡಿಸಿ ಇರುವ ಮೈಸೂರು ಗೆಜೆಟ್ II ನೆ ಭಾಗದ 28ನೆ ನಂಬರು 1904ನೆ ಇಸವಿ ಜುಲೈ ತಾರೀಖಿನ 427, 428ನೆ ಪೇಜುಗಳಲ್ಲಿನ ಇಸ್ತಿಹಾರ್ ಮೂಲಕ ತಿಳಿದುಕೊಳ್ಳಬಹುದು.

ಎ. ವೇದಾಂತದೇಸಿಗಂ ಅಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಕಡೂರು ಡಿಸ್ಟ್ರಿಕ್ಟ್.